ಸರಿಯಾಗಿದೆಯೆಂದು ಸಾಗರದ ಸಹಾಯಕ ಕಾರ್ಯಪಾಲಕ ಅಭಿಯಂತರರಿಂದ ಇದೀಗ ತಿಳಿದುಬಂದಿದೆ. ಈ ಪಟ್ಟಣಕ್ಕೆ ಒಟ್ಟು ೧೧ ಕೊಳವೆ ಬಾವಿಗಳಿಂದ ನೀರನ್ನು ದಿನಂಪ್ರತಿ ತಲಾ ೭೦ ಲೀಟರ್ ಒದಗಿಸಲಾಗುತ್ತಿದೆ.

ಈ ಯೋಜನೆಗೆ ಕಲ್ಲಿಹಳ್ಳಕ್ಕೆ ಅಡ್ಡಲಾಗಿ ಕಟ್ಟಬೇಕಾಗಿರುವ ಅಣೆಕಟ್ಟು ಕಟ್ಟಲು ಕರ್ನಾಟಕ ವಿದ್ಯುತ್ ನಿಗಮವನ್ನು ಪರವಾನಗಿಗಾಗಿ ಕೋರಲಾಗಿದೆ. ಇದರ ಬಗ್ಗೆ ಸರ್ಕಾರದಿಂದ ಕೂಡ ನಿಗಮಕ್ಕೆ ಕೋರಿಕೆ ಹೋಗಿದೆ. (ವನಇ. ೭೫. ಯುಎಂಎಸ್. ೮೫ ದಿನಾಂಕ ೩-೧-೮೫). ನಿಗಮದವರು ಇದರ ಒಪ್ಪಿಗೆ ಕೊಡಲು ನೀಲಿ ನಕಾಶೆಯನ್ನು ಕೇಳಿದ್ದಾರೆ. ಅದನ್ನು ತಯಾರಿಸಲಾಗಿದೆ. ಇಷ್ಟರಲ್ಲೇ ಅವರಿಗೆ ಕಳಿಸಿಕೊಟ್ಟು ಮಂಜೂರಾತಿಯನ್ನು ಪಡೆದು ಕಾರ್ಯಾರಂಭವನ್ನು ಪಾಡಲಾಗುವುದು. ಈ ಯೋಜನೆಗೆ ಡಿಸೆಂಬರ್ ಕೊನೆಯವರೆಗೆ ೧೦.೭೨ಲಕ್ಷ ರೂ.ಗಳು ಖರ್ಚಾಗಿದೆ. ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮಲತಾಯಿ ಧೋರಣೆ ಮಾಡುವ ಪ್ರಶ್ನೆಯೇ ಇಲ್ಲ. ಅದರಲ್ಲೂ ನೀರಿನ ವಿಚಾರದಲ್ಲಿ ಇಲ್ಲವೇ ಮಾನ್ಯ ಸದಸ್ಯರಿಗೆ ಏತಕ್ಕೆ ಆ ಅಭಿಪ್ರಾಯ ಇದೆಯೋ ಗೊತ್ತಿಲ್ಲ.

(vii) ಸುಳ್ಯದ ಜಾಲ್ಯೂರು ಸಂಬ್ರುಹ್ಮಣ್ಯ ರಸ್ತೆಯಲ್ಲಿ ಬರುವಂಥ ಮೋರಿಗಳನ್ನು ದುರಸ್ತಿ ಪಡಿಸುವ ಬಗ್ಗೆ

ಶ್ರೀ ಕೆ.ಕುಶಾಲ. (ಸುಳ್ಯ ಸುಳ್ಯದ ಜಾಲ್ಯೂರು.–ಸಂಬ್ರುಹ್ಮಣ್ಯ ರಸ್ತೆಯಲ್ಲಿ ಬರುವಂಥ ಹಲವು ಮೋರಿಗಳು ಅತೀ ಕ್ಷೀಣಾವಸ್ಥೆಯಲ್ಲಿದ್ದು ಪ್ರಯಾಣಿಕರು ಜೀವ ಕೈಯಲ್ಲಿ ಹಿಡಿದು ಪ್ರಯಾಣಿಸಬೇಕಾದ ಪರಿಸ್ಥಿತಿ ಇದೆ, ಸಂಬ್ರುಹ್ಮಣ್ಯ ಕ್ಷೇತ್ರದ ಜನಾಕರ್ಷಣೆ ದಿನೇ ದಿನೇ ಹೆಚ್ಚುತ್ತಿದ್ದು ವಾಹನ ಸಂಚಾರವೂ ಹೆಚ್ಚುತ್ತಿದೆ. ಈ ರಸ್ತೆಯಲ್ಲಿ ಬರುವ ಸೋಣಂಗೇರಿ ಹಾಗೂ ಕೊಯ್ಯುಳಿ ಮೋರಿಗಳಂತೂ ಅತಿ ಕಿರಿದಾಗಿದ್ದು ದುರ್ಬಲವಾಗಿದೆ ಒಂದು ಸಣ್ಣ ಮಳೆ ಬಂದರೂ ವಾಹನ ಸಂಚಾರಕ್ಕೆ ಭೀಕರ ಅಡ್ಡಿಯಾಗುತ್ತಿದೆ. ಈ ಎರಡು ಮೋರಿಗಳನ್ನು ಹಿಗೆ ಬಿಟ್ಟರೆ ಅಪಘಾತ ಸಂಭವಿಸಿ ಅಪಾರ ಜೀವಹಾನಿಯಾಗುವ ಎಲ್ಲಾ ಸಾಧ್ಯತೆಗಳೂ ಇವೆ. ದುರ್ಬಲ ಸೇತುವೆ ನಿಧಾನವಾಗಿ ವಾಹನ ಚಲಿಸಿ." ಎಂಬ ಫಲಕ ಇಲ್ಲಿ ಕೆಲವು ವರ್ಷಗಳ ಹಿಂದಿನಿಂದಲೂ ರಾರಾಜಿಸುತ್ತಿದ್ದು ಇನ್ನೂ ಈ ಬಗ್ಗೆ ತಕ್ಕ ಕ್ರಮ ಕೈಗೊಳ್ಳದಿರುವುದು ವಿಪರ್ಯಾಸವೇ ಸರಿ. ಸರಕಾರ ಈ ಕೂಡಲೇ ಈ ಗಂಭೀರ ಪರಿಸ್ಥಿತಿಯನ್ನು ಮನಗಂಡು ಕೂಡಲೇ ಕಾರ್ಯೋನ್ಮುಖವಾಗಿ ಮುಂದೆ ಬರುಬಹುದಾದಂಥ ಅನಾಹುತವನ್ನು ತಪ್ಪಿಸಬೇಕಾಗಿ ಕಳಕಳಿಯ ಮನವಿ ಮಾಡುತ್ತಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ (ಮಾನ್ಯ ಲೋಕೋಪಯೋಗಿ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ತಿಳಿಸಿದ್ದಾರೆ ಆ ವಿಷಯದ ಬಗ್ಗೆ ವರದಿ ತರಿಸಬೇಕಾಗುತ್ತದೆ. ಯಾವಯಾವ ಸೇತುವೆಗಳು ನೀಕ್ ಇದೆ ಅದರ ಬಗ್ಗೆ ವರದಿ ತರಿಸಿ ಎಲ್ಲೆಲ್ಲಿ ಅವುಗಳನ್ನು ಸರಿಪಡಿಸಬೇಕೋ ಅಂಥ ವುಗಳನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಅದ್ಯಾವುದೋ ಹಳೆಯ ರಸ್ತೆ ಇರಬೇಕು.

(viii) ದಕ್ಷಿಣ ಕನ್ನಡ ಜಿಲ್ಲೆಯ ಪರಿಶಿಷ್ಟ ವರ್ಗದ ಮೀನಂಗಾರರಿಗೆ ಸಾಲವನ್ನೂದಗಿಸುವ ಬಗ್ಗೆ

ಶ್ರೀ ಜಿ. ಎಸ್. ಆಚಾರ್ —ವಿಶೇಷ ಘಟಕದ ಯೋಜನೆಯನ್ವಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗದ ಮೀನುಗಾರರಿಗೆ ಯಾಂತ್ರೀಕೃತ ದೋಣಿ ಪಡೆಯಲು ಸಹಾಯಧನ ನೀಡುವ ಯೋಜನೆಯನ್ನು ೧೯೮೫-೮೬ನೇ ವರ್ಷದಲ್ಲಿ ರೂಪಿಸಲಾಗಿತು ಮೀನುಗಾರಿಕಾ ಇಲಾಖೆಯ ಮಂಗಳೂರು ವಿಭಾಗದ ಉಪನಿರ್ದೇಶಕರ ಈ ಸಲುವಾಗಿ ಕರಾವಳಿ ತಾಲ್ಲೂಕುಗಳ ಪರಿಶಿಷ್ಟ ವರ್ಗದ ಮೀನುಗಾರರಿಂದ ಅರ್ಜಿ ಸ್ವೀಕರಿಸಿ ೧೩ ಬೋಟುಗಳಿಗಾಗಿ ಮಂಜೂರಾತಿ ನೀಡಿದ್ದಾರೆಂದೂ ಒಂದು ಪಂಗಡದವರಿಗೆ ಮಂಗ್ಳೂರ್ ಡಿಸ್ಟ್ರಿಕ್ಟ್ ಬ್ಯಾಂಕ್‌ನಿಂದ ಸಾಲ ಮಂಜೂರಾಗಿದ್ದರೂ ಸಬ್ಸಿಡಿ ನೀಡಿಲ್ಲ ವೆಂದೂ ತಿಳಿದುಬಂದಿದೆ. ಆನಾದಿಯಿಂದ ಅಲಕ್ಷಿಸಲ್ಪಟ್ಟ ಪರಿಶಿಷ್ಟ ಜಾತಿಯ ಮೀನುಗಾರರಿಗೆ ಸರ್ಕಾರ ಯೋಜನೆ ರೂಪಿಸುವುದು ಸ್ತುತ್ಯಾರ್ಹವಾದರೂ ಈತನಕ ಯಾವುದೇ ಕ್ರಮ ಕೈಗೊಳ್ಳದಿರುವುದು ದ್ಯೂರದೃಷ್ಟಕರ. ಈ ಯೋಜನೆ ಇದೇ ಮಾರ್ಚ್ ತಿಂಗಳ ಅಂತ್ಯದೊಳಗೆ ಕಾರ್ಯಗತವಾಗಬೇಕಾದ್ದರಿಂದ ಇಲಾಖೆಯವರು ಸಂಬಂಧಪಟ್ಟ ಬ್ಯಾಂಕಿನವರನ್ನು ಸಂಪರ್ಕಿಸಿ ಅರ್ಜಿ ಹಾಕಿದ ಪಂಗಡದವರಿಗೆ